ಶ್ರೀ ಎಂ. ವಿ. ಕೃಷ್ಣಪ್ಪ.—ಹಾರ್ಬರಿಗೆ ಹತ್ತಿರದಲ್ಲೇ ಆಗಬೇಕೆಂಬ ನಿಯಮವಿದೆ. ಅದರಿಂದ ಅದನ್ನು ಬೇರೆ ಕಡೆಗೆ ಸರ್ಗಾಯಿಸಲು ಸಾಧ್ಯವಿಲ್ಲ. ಅಲ್ಲಿ ಕಟ್ಟಿದಿದ್ದರೆ ಸಾಮಾನುಗಳ ಸಾಗಾಣಿಕೆಗೆ ಬಹಳ ತೊಂದರೆಯಾಗುವುದು.

Sri G. V. GOWDA.—May I know when the Oil Refinery would be started ? Is it included in the 4th Plan ?

Sri M. V. KRISHNAPPA.—The Hon'ble Member may put a separate Question.

ಶ್ರೀ ಎಸ್. ಶಿವಪ್ಪ.—ನಣ್ಣ ಸಣ್ಣ ಹಿಡುವಳೀದಾರರಿಗಿದ್ದ ಜಮೀನನ್ನು ಕಿತ್ತುಕೊಂಡು ವ್ಯವಸಾಯಕ್ಕೆ ಯೋಗ್ಯವಾಗಿದ್ದ ಭೂಮಿಯನ್ನು ವ್ಯವಸಾಯಕ್ಕೆ ಬಿಟ್ಟುಕೊಡದೆ ಆ ಜಮೀನನ್ನು ದೊಡ್ಡ ದೊಡ್ಡ ಬಂಡವಾಳಗಾರರಿಗೆ ದುಡ್ಡನ್ನವರಿಗೆ ಅನುಕೂಲಮಾಡಿಕೊಡಲು ಸರ್ಕಾರದವರು ಈ ಒಂದು ಸಂಚನ್ನು ನಡೆಸಿರುತ್ತಾರಲ್ಲವೇ ?

ಶ್ರೀ ಎಂ ವಿ. ಕೃಷ್ಣಪ್ಪ.—ರೈತನಾದವನಿಗೆ ಗೊಬ್ಬರ ಬಹಳ ಮುಖ್ಯವಾದದ್ದು. ಸಾಮಾನ್ಯವಾಗಿ ರೈತರೇ ಬಡತನದಲ್ಲಿ ಹುಟ್ಟಿಗೆ ಇರುತ್ತಾರೆ. ಅಂಥ ಬಡವರ ಉದ್ಧಾರಕ್ಕಾಗಿ ಅಲ್ಲಿ ಈ ಕಾರ್ಖಾನೆಯನ್ನು ಸ್ಥಾಪಿಸಲಾಗುತ್ತಿದೆ. ಅದು ದುಡ್ಡನ್ನವರಿಗಾಗಿ ಅಲ್ಲ.

Sri C. J. MUCKANNAPPA.—Will Government hold out a promise to this House that there is a commitment on the part of the Government of India to include the oil Refinery in the 4th plan ? Is there any direction to the State Government to acquire so much land for locating the oil Refinery at Mangalore ?

Sri M. V. KRISHNAPPA.—The Hon'ble Member may put a separate Question.

ಶ್ರೀ ಎಸ್. ಗೋಪಾಲಗೌಡ.—ನಿರ್ದಿಷ್ಟವಾದ ಪುನರ್ವಸತಿಯ ಯೋಜನೆ ಇದೆ ಎಂದು ಹೇಳಿದ್ದಾರೆ. ಹಾಗೆ ನಿರ್ದಿಷ್ಟವಾಗಿರತಕ್ಕ ಪುನರ್ವಸತಿಯ ಯೋಜನೆ ಯಾವುದು ? ಅದನ್ನು ಯಾವಾಗ ಆರಂಭಮಾಡುತ್ತಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆಗಲೇ ಆರಂಭವಾಗಿದೆ. ಅಲ್ಲಿನ್ನೂ ಸ್ವಲ್ಪ ಮಾಡತಕ್ಕ ಕೆಲಸ ಉಳಿದಿದೆ. ಅದನ್ನು ಆದಷ್ಟು ಬೇಗ ಮುಗಿಸಿ ಕೊಡಲಾಗುತ್ತದೆ.

Re-grant of the abolished Jahagir Lands.

*Q.—43. Sri A. J. DODDAMETI (Ron).—

Will the Minister for Revenue be pleased to state :—

(*a*) whether it is a fact that the work relating to the re-grant of the abolished Jahagir lands to ryots in Gajendragad of Ron Taluk, Dharwar District, has been taken up ;

(*b*) whether it is a fact that a proposal for the appointment of a Special Officer for this work is under their consideration ?

*A.— Sri M. V. KRISHNAPPA (Minister for Revenue).—

(*a*) Yes.

(*b*) No.

2-00 P.M.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಗಜೇಂದ್ರಗಡದಲ್ಲಿ ರದ್ದುಮಾಡಲಾದ ಜಾಹಗೀರು ಭೂಮಿಯಲ್ಲಿ ಎಷ್ಟು ಹಳ್ಳಿಗಳಿವೆ, ಮತ್ತು ಎಷ್ಟು ಎಕರೆ ಜಮೀನು ಇದೆ ?

†ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಸುಮಾರು 23 ಹಳ್ಳಿಗಳಿವೆ. 41,494 ಎಕರೆ 23 ಗುಂಟೆ ಜಮೀನು ಇದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಕೆಲಸಕ್ಕಾಗಿ ವಿಶೇಷ ಅಧಿಕಾರಿಯೊಬ್ಬರನ್ನು ನೇಮಿಸುವ ಅವಶ್ಯಕತೆ ಇಲ್ಲವೇ, ಏಕೆಂದರೆ, ಕೇವಲ ತಹಶೀಲ್‌ದಾರರೊಬ್ಬರಿಂದಲೇ ಈ ಕೆಲಸ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಆಗಾಗ್ಗೆ ತಾವು ಈ ವಿಷಯವನ್ನು ಹೇಳುತ್ತಿದ್ದೀರಿ. ಸರ್ಕಾರದವರು ಈಗ ಅಲ್ಲಿರುವ ಸಿಬ್ಬಂದಿಯವರೇ ಆ ಕೆಲಸವನ್ನು ಮುಗಿಸಬೇಕೆಂದು ಹೇಳಿದ್ದಾರೆ. ಈಗ ಬಹಳ ವಿಧಾನಪಾಗಿರುವುದರಿಂದ, ಸಂಬಂಧಪಟ್ಟ ಕೆಲಸಕ್ಕೆ ಬೇರೆ ಒಬ್ಬ ಅಧಿಕಾರಿಯನ್ನು ನೇಮಿಸುವ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಸ್ವಾಮಿ, ಈಗ ಈ ಜಾಹಗೀರು ರೈತರ ಕಡೆಯಿಂದ ಕಂದಾಯ ವಲ್ಲದೆ ಲಾವಣಿ ಹಣವನ್ನು ಸಹ ಸರ್ಕಾರದವರು ವಸೂಲು ಮಾಡುತ್ತಿದ್ದಾರೆ. ಈ ಬಗ್ಗೆ ರೈತರುಗಳು ಅರ್ಜಿಗಳನ್ನು ಕೊಟ್ಟಿದ್ದಾರೆ. ಇದರ ಮೇಲೆ ಸ್ಟೇ ಆರ್ಡರ್ ಸಹ ತಂದಿದ್ದಾರೆ. ಆದ್ದರಿಂದ ಸರ್ಕಾರದವರಿಗೆ ಲಾವಣಿ ಹಣ ವಸೂಲು ಮಾಡುವ ಅಧಿಕಾರವಿರುವುದಿಲ್ಲ. ಪುನಃ ಇದರ ಬಗ್ಗೆ ಮಾತುಕತೆಗಳೇನಾದರೂ ನಡೆದಿವೆಯೇ, 20-11-1962 ರಲ್ಲಿ ಹೈಕೋರ್ಟಿನವರು ಸ್ಟೇ ಆರ್ಡರ್ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೈ-ಕೋರ್ಟ್ ಆರ್ಡರ್ ತೋರಿಸಿದ ಮೇಲೆ ಲಾವಣಿ ವಸೂಲು ಮಾಡಕೂಡದೆಂದು ಹೇಳಿದ್ದೇನೆ. ಈಗ ಸರ್ಕಾರದವರಿಗೆ ಹೈಕೋರ್ಟ್ ಆರ್ಡರ್ ಪ್ರಕಾರ ಲಾವಣಿ ವಸೂಲು ಮಾಡುವ ಹಕ್ಕು ಬರುವುದಿಲ್ಲ. ಆದರೆ ಕಂದಾಯ ವಸೂಲು ಮಾಡುವ ವಿಷಯವನ್ನು ನಮ್ಮ ಇಲಾಖೆಯಲ್ಲಿ ಪರಿಶೀಲನೆ ಮಾಡುತ್ತಿದ್ದಾರೆ. ಅಲ್ಲದೆ ಹಿಂದಿನ ಬಾಕಿಗಳೇನಾದರೂ ಇದ್ದರೆ, ಕಂದಾಯ ಮತ್ತು ಕಂದಾಯದ ಬಾಕಿಯನ್ನು ವಸೂಲು ಮಾಡುವುದಕ್ಕೆ ಅಡಚಣೆಗಳೇನಾದರು ಇವೆಯೇ ಎಂದು ಯೋಚನೆ ಮಾಡುತ್ತಿದ್ದೇನೆ.

Mr. SPEAKER.—Questions Hour is over. All the questions in the list are answered.

CALLING ATTENTION TO A MATTER OF URGENT PUBLIC IMPORTANCE *Re*: STRIKE AND LOCK-OUT IN THE H.A.L., BANGALORE.

Sri A. KRISHNA SHETTY.—I call the attention of the Minister for Transport and Tourism to the strike and lock-out in the H.A.L., Bangalore.

Mr. SPEAKER. I have read every word of the statement of the Hon. Minister. It contains a memorandum. To save time for the benefit of the Members, he may place a copy of it on the Table of the House. The hon. member should have been in the papers that the matter is over and work has commenced. I can understand if thestrike is continuing and if there is great dislocation either to the people or to the Industry; then the work of the House could be disturbed to call attention. If the Members are not supplied with copies of the statement of the Hon. Minister, I have no objection to give a copy for perusal. It will be placed on the Table of the House. Would that not be all right? What is the sense of the House?..... All right. Let it be read.

Sri S. SIVAPPA.—I suggest that the Minister may give a gist of his statement.